
ಕಥೆ : ಸ್ವಾಮಿ ವಿಮೂರ್ತಾನಂದ


ಚಿತ್ರ : ಶಂಕರ್

# ಶ್ರೀರಾಮಕೃಷ್ಣರಿಗೆ ಶರಣಾದ ಭಕ್ತ ದಂಪತಿಗಳು

**1** ೧೮೮೨ನೇ ಇಸವಿ. ನವಗೋಪಾಲ ಘೋಷ್ ಮತ್ತು ಅವನ ಪತ್ನಿಯಾದ ನಿಸ್ತಾರಣಿ ದೇವಿ ಶ್ರೀರಾಮಕೃಷ್ಣರ ದರ್ಶನಕ್ಕಾಗಿ ಬಂದಿದ್ದಾರೆ.






**2** ಮೂರು ವರ್ಷಗಳ ನಂತರ,




**3** ಶ್ರೀರಾಮಕೃಷ್ಣರು ಇಷ್ಟೊಂದು ದಿನಗಳಾದ ಮೇಲೆ ತನ್ನನ್ನು ನೆನಪು ಮಾಡಿಕೊಂಡಿದ್ದಾರೆ ಎಂದು ತಿಳಿದು ನವಗೋಪಾಲನಿಗೆ ಸಂತೋಷವಾಯಿತು. ಅವನು ತನ್ನ ಕುಟುಂಬದೊಡನೆ ಶ್ರೀರಾಮಕೃಷ್ಣರ ಬಳಿಗೆ ಒಡನೇ ಹೋದನು.

**4** ಒಂದು ದಿನ ನವಗೋಪಾಲನ ಮನೆಯಲ್ಲಿ ಭಾಗವತ ಪ್ರವಚನ ಏರ್ಪಾಡಾಗಿತ್ತು. ಹಾಗೆಯೇ ಶ್ರೀಕೃಷ್ಣ ಸಂಕೀರ್ತನೆಯೂ ಆಯೋಜಿತವಾಗಿತ್ತು. ಶ್ರೀರಾಮಕೃಷ್ಣರು ಈ ಸಮಾರಂಭದಲ್ಲಿ ಭಾಗವಹಿಸಿದ್ದರು. ಹಠಾತ್ತಾಗಿ ಅವರು ಭಗವದ್ಭಾವಕ್ಕೆ ಏರಿದರು ಮತ್ತು ಶ್ರೀಕೃಷ್ಣಭಾವದಿಂದ ನರ್ತನ ಮಾಡಲಾರಂಭಿಸಿದರು.




5
ಆ ಸಮಯದಲ್ಲಿ ನವಗೋಪಾಲನು ಶ್ರೀರಾಮಕೃಷ್ಣರಿಗೆ ಮಾಲೆಯನ್ನು ಹಾಕಿದನು. ಭಕ್ತಿಯಿಂದ ಪ್ರಾರ್ಥನೆ ಮಾಡಿದನು.
ಪ್ರಭೂ, ದಯವಿಟ್ಟು ನನ್ನನ್ನು ಕಾಪಾಡಿ. ನಾನು ಪ್ರಾಪಂಚಿಕತೆಯಲ್ಲಿ ಮುಳುಗಿಬಿಟ್ಟಿದ್ದೇನೆ.
ನಿನಗೆ ಏನು ಮಾಡಲು ಸಾಧ್ಯವಾಗದಿದ್ದರೂ ಪರವಾಗಿಲ್ಲ. ದಿನಕ್ಕೆ ಒಂದು ಸಲವಾದರೂ ನನ್ನ ಸ್ಮರಣೆ ಮಾಡು.
6
ಹಾಗೆಯೇ ಶ್ರೀರಾಮಕೃಷ್ಣರು ನಿಸ್ತಾರಣಿ ದೇವಿಗೂ ಉಪದೇಶ ನೀಡುತ್ತಿದ್ದರು. ಆಕೆಯ ಮನಸ್ಸು ಪರಿಶುದ್ಧವಾಗಿತ್ತು.
ತಾಯಿ, ನಿನಗೇಕೆ ನನ್ನಲ್ಲಿ ಇಷ್ಟೊಂದು ಭಕ್ತಿ?
ಗುರುದೇವ, ಇದನ್ನು ಹೇಳುವುದು ಕಷ್ಟ. ಪ್ರಹ್ಲಾದ ಮತ್ತು ಧ್ರುವ – ಇಬ್ಬರೂ ತಮ್ಮ ತಂದೆತಾಯಿಗಳನ್ನು ಕೂಡ ಭಗವಂತನ ಪ್ರೇಮದಿಂದ ಮರೆತುಬಿಟ್ಟರು. ಅಂಥ ಭಗವಂತನ ರೂಪವನ್ನು ನಿಮ್ಮಲ್ಲಿ ನೋಡುತ್ತಿದ್ದೇನೆ.
7
ಇನ್ನೊಂದು ದಿನ... ಶ್ರೀರಾಮಕೃಷ್ಣರು ನಿಸ್ತಾರಣಿ ದೇವಿಗೆ ಒಂದು ಬೆಕ್ಕು ಮತ್ತು ಅದರ ಮರಿಯನ್ನು ಕೊಟ್ಟು ನೋಡಿಕೊಳ್ಳುವಂತೆ ಹೇಳಿದರು. ಅಲ್ಲಿಯವರೆಗೆ ಬೆಕ್ಕು ಶ್ರೀರಾಮಕೃಷ್ಣರ ಆಶ್ರಯದಲ್ಲಿ ಇತ್ತು. ಅವರು ನಿಸ್ತಾರಣಿಗೆ ಹೀಗೆ ಹೇಳಿದರು: "ಬೆಕ್ಕು ಮತ್ತು ಅದರ ಮರಿ ನನ್ನಲ್ಲಿ ಶರಣಾಗಿವೆ. ಅವುಗಳನ್ನು ಜಾಗರೂಕತೆಯಿಂದ ನೋಡಿಕೋ."
ಎಲ್ಲ ವಿಧದಿಂದಲೂ ನಿನಗೆ ಒಳ್ಳೆಯದಾಗಲಿ. ನಿನ್ನ ಇಷ್ಟದೇವತೆಯ ದರ್ಶನವನ್ನು ನೀನು ಪಡೆದುಕೊಳ್ಳುವೆ.

**8** ಸ್ವಲ್ಪ ವರ್ಷಗಳಾದ ನಂತರ... ಒಂದು ದಿನ ನಿಸ್ತಾರಣಿ ಜಪ ಮಾಡುತ್ತಿದ್ದಾಗ, ಶ್ರೀರಾಮನ ದರ್ಶನವನ್ನು ಪಡೆದುಕೊಂಡಳು.




**9** ಆಕೆ ಶ್ರೀರಾಮನ ಪಾದವನ್ನು ಸ್ಪರ್ಶಿಸಬೇಕೆಂದು ಬಾಗಿದಾಗ, ಅಲ್ಲಿ ಶ್ರೀರಾಮಕೃಷ್ಣರೇ ಕಾಣಿಸಿಕೊಂಡರು.



ತಾಯಿ, ಈಗ ನಿನಗೆ ಗೊತ್ತಾಯಿತೇ, 'ನಾನು ಯಾರು?' ಎಂದು.

**10** ಅನಂತರ ಶ್ರೀರಾಮಕೃಷ್ಣರು ಶ್ರೀರಾಮಚಂದ್ರನಲ್ಲಿ ಐಕ್ಯವಾದರು. ತಮ್ಮ ಉಪದೇಶಗಳಲ್ಲಿ ಶ್ರೀರಾಮಕೃಷ್ಣರು ಹೇಳುತ್ತಾರೆ, 'ಇಷ್ಟದೇವತೆಯ ದರ್ಶನವಾದಾಗ, ಗುರುವು ಅದರಲ್ಲಿ ಐಕ್ಯನಾಗುತ್ತಾನೆ' ಎಂದು.



**11** ನಿಸ್ತಾರಣಿ ದೇವಿ ಕೌಟುಂಬಿಕ ಜೀವನದಲ್ಲಿ ಒಂದು ಪ್ರತಿಜ್ಞೆ ಮಾಡಿದ್ದಳು. 'ತನಗೊಬ್ಬ ಮಗ ಹುಟ್ಟಿದರೆ, ಅವನನ್ನು ಶ್ರೀರಾಮಕೃಷ್ಣರ ಸೇವೆಗೆ ಸಮರ್ಪಿಸಿಬಿಡುತ್ತೇನೆ' ಎಂದು.

12

ಗುರುದೇವ, ಈ ಮಗುವನ್ನು ನಿಮ್ಮ ಪಾದಗಳಿಗೆ ಸಮರ್ಪಿಸುತ್ತಿದ್ದೇನೆ. ದಯವಿಟ್ಟು ಒಪ್ಪಿಸಿಕೊಳ್ಳಿ.





ಬಹಳ ವರ್ಷಗಳಾದ ನಂತರ ದೊಡ್ಡವನಾದ ಮೇಲೆ ಆ ಹುಡುಗನೇ ರಾಮಕೃಷ್ಣ ಮಹಾಸಂಘವನ್ನು ಸೇರಿದರು. 'ಸ್ವಾಮಿ ಅಂಬಿಕಾನಂದ' ಎಂಬ ಹೆಸರಿನಿಂದ ಅವರು ಪ್ರಖ್ಯಾತರಾದರು.

13

ಶ್ರೀರಾಮಕೃಷ್ಣರ ಮಹಾಸಮಾಧಿಯ ನಂತರ ನವಗೋಪಾಲನು ಎಲ್ಲ ಮಕ್ಕಳಿಗೆ ಸಿಹಿಯನ್ನು ಹಂಚುತ್ತಿದ್ದನು. ಆಗ ಶ್ರೀರಾಮಕೃಷ್ಣರ ಗುಣಗಾನ ಮಾಡುತ್ತಿದ್ದನು.



14

೧೮೯೮ನೆಯ ಇಸವಿ ಫೆಬ್ರವರಿ ೬ ರಂದು ನವಗೋಪಾಲನ ಮನೆಯಲ್ಲಿ ನಡೆದ ಶ್ರೀರಾಮಕೃಷ್ಣರ ಪೂಜೆಯಲ್ಲಿ ಸ್ವಾಮಿ ವಿವೇಕಾನಂದರು ಪಾಲ್ಗೊಂಡರು. ಅಂದು ಅವರು ಹಾಡಿದರು, ನರ್ತಿಸಿದರು. ಗಾಢ ಧ್ಯಾನದ ನಂತರ ಅವರು 'ಸ್ಥಾಪಕಾಯ ಚ ಧರ್ಮಸ್ಯ' ಎಂದು ಆರಂಭವಾಗುವ ಶ್ರೀರಾಮಕೃಷ್ಣರ ಬಗೆಗಿನ ಶ್ಲೋಕವನ್ನು ರಚಿಸಿ ಅಲ್ಲಿಯೇ ವಾಚಿಸಿದರು.

15

ನಿಸ್ತಾರಿಣಿಗೆ ತುಂಬ ವಯಸ್ಸಾಯಿತು. ಆಕೆಯ ಆರೋಗ್ಯ ಕೂಡ ಕೆಟ್ಟಿತು. ಆದರೂ ಆಕೆ 'ಸಂದೇಶ' ಎಂಬ ಸಿಹಿತಿಂಡಿಯನ್ನು ಕೈಯಾರೆ ಮಾಡುತ್ತಿದ್ದಳು. ಅದನ್ನು ಸ್ವತಃ ಶ್ರೀರಾಮಕೃಷ್ಣರಿಗೆ ಅರ್ಪಿಸುತ್ತಿದ್ದಳು. ಕಡೆಗೆ ಶ್ರೀರಾಮಕೃಷ್ಣರ ಪವಿತ್ರ ನಾಮವನ್ನು ಉಚ್ಚರಿಸುತ್ತ, ಅವರ ಪಾದಪದ್ಮಗಳನ್ನು ಸೇರಿದಳು.

